

# ‘ನಿನ್ನ ಬಲಗೈ ಹೆಬ್ಬೆರಳ ಕೊಡುವಂಥವನಾಗು’ ಎಂದ ಗುರು ದ್ರೋಣ

**ದ್ರೋಣನ** ಬಿಲ್ಲು ಜಾಣ್ಮೆ ಕೇಳಿ ಅವನ ಬಳಿ ಧನುರ್ವೇದವನ್ನು ಕಲಿಯಬೇಕು ಎಂದು ಸಾವಿರಾರು ರಾಜರು, ರಾಜಕುಮಾರರು ಬರತೊಡಗಿದರು. ಅವರಲ್ಲಿ ಬೇಡರ ರಾಜ ಹಿರಣ್ಯಧನುವಿನ ಮಗ ಏಕಲವ್ಯನೂ ಒಬ್ಬ. ಇವನು ಬೇಡರವನು ಎಂದುಕೊಂಡು ಅವನನ್ನು ತೆಗೆದುಕೊಳ್ಳಲಿಲ್ಲ. ಇವನು ಅವರಿಗೆ ಸಮನಾಗಿಬಿಡುತ್ತಾನಲ್ಲ ಎಂದುಕೊಂಡ, ಆ ಧರ್ಮಜ್ಞ!

ಆದರೂ ಅವನು ದ್ರೋಣನ ಕಾಲಿಗೆ ತಲೆಮುಟ್ಟಿಸಿ ಆ ನೆಪ್ಪನ್ನು ಹಿಡಿದುಕೊಂಡು ಮರಳ ಕಾಡನ್ನು ತಲುಪಿದ. ಅಲ್ಲಿ ತನ್ನ ಕಾಡ ಮಣ್ಣನ್ನು ಆ ನೆಪ್ಪಿಗೆ ತುಂಬಿ ದ್ರೋಣನನ್ನು ಮಾಡಿದ. ಅದರ ಮುಂದೆ ತುಂಬಾ ಕಟ್ಟುನಿಟ್ಟಾಗಿ ಬಿಲ್ಲು ಬಾಣದ ಯೋಗ ಮಾಡುತಿದ್ದ.

ಬಾಣ ತೆಗೆಯುವುದು, ಬಾಣ ಹೂಡುವುದು, ಬಾಣ ಬಿಡುವುದು ಇವೆಲ್ಲಾ ಅವನ ಕೈಚಳಕದಲ್ಲಿ ತುಂಬಾ ಸಲೀಸಾಗಿಬಿಟ್ಟಿತು.

ಹೀಗಿರುವಾಗ ಒಂದು ಸಾರಿ ಪಾಂಡವರು ಬೇಟೆಗೆ ಎಂದು ರಥದಲ್ಲಿ ಹೊರಟರು. ಜತೆಗೆ ಪಾಂಡವರ ಸಾಮಾನು ಹೊರಲು ಒಬ್ಬ ಆಳು. ಮುಂದೆ ಒಂದು ನಾಯಿ. ಅವರು ಕಾಡೊಳಗೆ ತಂತಮ್ಮ ಕೆಲಸ ಅಂತ ಓಡಾಡುತ್ತಿದ್ದರು.

ಅವರ ಮೂಢಾತ್ಮ ನಾಯಿ ಓಡಾಡತಾ ಓಡಾಡತಾ ಕೈಕಾಲೆಲ್ಲ ಕೊಳೆ ಮೆತ್ತಿಕೊಂಡು, ಕಪ್ಪಗೆ, ಜಿಂಕೆ ಚರ್ಮ ಸುತ್ತಿಕೊಂಡು, ಜಟೆ ಬಿಟ್ಟುಕೊಂಡಿದ್ದ ಬೇಡರ ಮಗನ ವಾಸನೆ ಹಿಡಿದು ಜೋರಾಗಿ ಬೊಗಳುವುದಕ್ಕೆ ಶುರುಮಾಡಿತು. ಹಾಗೆ ಬೊಗಳಿ ಆ ನಾಯಿ ಬಾಯಿ ಮುಚ್ಚುವುದರೊಳಗೆ ಅದರ ಬಾಯೊಳಕ್ಕೆ ಏಳು ಬಾಣ ಬಿಟ್ಟ.

ಬಾಯಿ ತುಂಬಾ ಬಾಣ ತುಂಬಿಕೊಂಡಿದ್ದ ಆ ನಾಯಿ ಪಾಂಡವರ ಕಡೆಗೆ ಓಡಿ ಬಂತು. ಅದನ್ನು ನೋಡಿ ವೀರರಾದ ಪಾಂಡವರಿಗೆ ಅತ್ಯಂತ ಬೆರಗು. ದನಿ ಕೇಳಿಯೇ ಬಾಣ ಬಿಡುವ ಚಾತುರ್ಯವು ಸಿದ್ಧಿಯ ತುಟ್ಟತುದಿ. ಅದು ನೋಡಿ ನಾಚಿದರು ಕೊಂಡಾಡಿದರು.

ಆ ಕಾಡು ಮನುಷ್ಯನನ್ನು ಹುಡುಕಿಕೊಂಡು ಕಾಡೆಲ್ಲ ಅಲೆದರು. ಕೊನೆಗೆ ಸತತವಾಗಿ ಬಾಣ ಬಿಡುತ್ತಲೇ ನಿಂತಿದ್ದ ಅವನನ್ನು ಕಂಡರು. ಅಂಥ ವಿಕಾರವಾದ ಬಟ್ಟೆಬರೆಯಲ್ಲಿದ್ದ ಅವನ ಗುರುತು ಹಿಡಿಯಲಿಲ್ಲ ಪಾಂಡವರು. ‘ನೀನು ಯಾರು?’ ಯಾರ ಪೈಕಿ ಎಂದು ಕೇಳಿದರು.

**ಏಕಲವ್ಯ:** ವೀರರೇ ನಿಷಾದಾಧಿಪತಿ ಹಿರಣ್ಯಧನುವಿನ ಮಗ ನಾನು. ದ್ರೋಣರ ಶಿಷ್ಯ. ಧನುರ್ವೇದ ಕಲಿಯುತಿದ್ದೇನೆ.

ಇಷ್ಟನ್ನು ತಿಳಿದು ಪಾಂಡವರು ಮರಳಿದರು. ದ್ರೋಣಾಚಾರ್ಯನಿಗೆ ನಡೆದದ್ದನ್ನೆಲ್ಲ ಹೇಳಿದರು. ಕುಂತಿಯ ಮಕ್ಕಳಲ್ಲಿ ಅರ್ಜುನ ಮಾತ್ರ ಏಕಲವ್ಯನ ಬಗೆಗೇ ಚಿಂತಿಸುತ್ತಿದ್ದ. ದ್ರೋಣ ಒಬ್ಬನೇ ಇದ್ದಾಗ ಹತ್ತಿರ ಬಂದು ಬೆಡಗಿನಿಂದ ಹೀಗಂದ–

**ಅರ್ಜುನ:** ನೀವು ಅವತ್ತು ನನ್ನನ್ನು ತಬ್ಬಿಕೊಂಡು ಪ್ರೀತಿಯಿಂದ ಹೇಳಿದಿರಲ್ಲ, ನನ್ನ ಶಿಷ್ಯರಲ್ಲೆಲ್ಲ ನಿನ್ನೊಬ್ಬನನ್ನೇ ವಿಶೇಷವಾಗಿ ಮಾಡತೀನಿ ಅಂತ. ನಿನ್ನನ್ನು ಮೀರಿಸುವವರು ಯಾರೂ ಇರಲ್ಲ ಅಂತ. ಆದರೆ ನನಗಿಂತ ಇರಲಿ. ಲೋಕದಲ್ಲೆ, ಯಾರೂ ಮೀರಲಾರದ ವೀರ ಆ ಬೇಡರಾಜನ ಮಗ, ನಿಮ್ಮ ಇನ್ನೊಬ್ಬ ಶಿಷ್ಯ ಇದಾನಲ್ಲ.

**ವೈಶಂಪಾಯನ:** ಒಂದು ಗಳಿಗೆ ದ್ರೋಣ ಯೋಚಿಸಿದ. ನಿಶ್ಚಯ ಮಾಡಿಕೊಂಡ. ಸವ್ಯಸಾಚಿಯನ್ನು ಕರೆದುಕೊಂಡು ಬೇಡರ ಮಗನ ಹತ್ತಿರ ಹೊರಟ. ಕೊಳಕು ಮೆತ್ತಿದ ಮೈ, ಸಿಕ್ಕು ಸಿಕ್ಕು ತಲೆ, ನಾರು ಬಟ್ಟೆ. ಬಿಲ್ಲಿಂದ ಬಾಣವನ್ನು ಹೊಮ್ಮಿಸುತ್ತಲೇ ಇರುವ ಏಕಲವ್ಯನನ್ನು ನೋಡಿದ.

ದ್ರೋಣ ಹತ್ತಿರಕ್ಕೆ ಬರುವುದನ್ನು ಕಂಡ ಏಕಲವ್ಯ, ಇದಿರುಗೊಂಡು ನೆಲಕ್ಕೆ ತಲೆ ಮುಟ್ಟಿಸಿದ.

ಬೇಡನಿಗೆ ಹುಟ್ಟಿದ ಅವನು ವಿಧಿಪೂರ್ವಕವಾಗಿ ದ್ರೋಣನಿಗೆ ಪೂಜೆ ಮಾಡಿದ. ತಾನು ತಮ್ಮ ಶಿಷ್ಯ ಎಂದು ಬಿನ್ನೈಸಿಕೊಂಡು ಕೈಯೆತ್ತಿ ಮುಗಿದುಕೊಂಡು ನಿಂತ.

ಆಗ ದ್ರೋಣ ಏಕಲವ್ಯನಿಗೆ ಈ ಮಾತನ್ನು ಹೇಳಿದ. ‘ನೀನು ನನ್ನ ಶಿಷ್ಯನೇ ಆದಮೇಲೆ ನನ್ನ ಸಂಬಳ ಕೊಡು’.

ಏಕಲವ್ಯನಿಗೆ ಆ ಮಾತು ಹಿತ ಅನಿಸಿತು. ಪ್ರೀತಿ ತುಂಬಿಕೊಂಡು ಕೇಳಿದ–

**ಏಕಲವ್ಯ:** ಏನು ಬಯಸತೀರಿ ಬುದ್ಧೀ. ಅಪ್ಪಣೆ ಮಾಡಿ ನನ್ನ ಗುರುವೇ. ನಿಮಗೆ ಕೊಡಬಾರದ್ದು ನನ್ನಲ್ಲಿ ಯಾವುದೂ ಇಲ್ಲ.

**ದ್ರೋಣ:** ‘ನಿನ್ನ ಬಲಗೈ ಹೆಬ್ಬೆರಳ ಕೊಡುವಂಥವನಾಗು’.

ಏಕಲವ್ಯ ದ್ರೋಣನ ಆ ಕರುಳಿರಿಯುವ ಮಾತನ್ನ ಕೇಳಿದ. ಕೊಟ್ಟ ಮಾತನ್ನ ಕಾಪಾಡಿಕೊಳ್ಳುವುದಕ್ಕೆ ಸದಾ ಸತ್ಯದಲ್ಲೇ ಮನಸಿಟ್ಟ ಅವನು, ಮನಸ್ಸು ದೀನವಾಗದ ಹಾಗೆ ನಗುಮುಖ ಮಾಡಿಕೊಂಡು, ತಕ್ಷಣವೇ ಹಿಂದೆ ಮುಂದೆ ನೋಡದೆ ತನ್ನ ಹೆಬ್ಬೆರಳನ್ನು ಕತ್ತರಿಸಿ ದ್ರೋಣನ ಪದತಲದಲ್ಲಿಟ್ಟು ಸಲ್ಲಿಸಿದ.

(ಸಶೇಷ)